## ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

***ಎಸ್‌ಸಿ.*** **258/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸುಪ್ರೀತ್ ಗೌಡ.ಕೆ.ಆರ್ | ***ಪ್ರಮಾಣ ಮಾಡಿಸಿದ ದಿನಾಂಕಃ*** | |
| **ತಂದೆ/ಗಂಡನ ಹೆಸರು** | ಃ ಶ್ರೀ ರಮೇಶ್ ಗೌಡ | **23.08.2024** | |
| **ವಯಸ್ಸು** | ಃ 28 ವರ್ಷ | | |
| **ವೃತ್ತಿ** | ಃ ಬೇಕರಿ ಕೆಲಸ | **ಪ್ರಾ.ಸಾ.** | ಃ 06 |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ 14 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈ ಮೊದಲು ನಾನು *2022* ಮೇ ಇಂದ *2023* ಜನವರಿ ಮೊದಲ ವಾರದ ವರೆಗೆ ಸಿದ್ದಲಿಂಗಪುರ ಗ್ರಾಮದಲ್ಲಿರುವ ಶಾರದಮ್ಮ ಎನ್ನುವವರ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಬೇಕರಿ ನಡೆಸುತ್ತಿದ್ದೆ. ಆ ಕಾಲಕ್ಕೆ ತಿಂಗಳಿಗೆ *15* ಸಾವಿರ ರೂಪಾಯಿ ಬಾಡಿಗೆ ಹಣ ಕೊಡುತ್ತಿದ್ದೆ ಮತ್ತು *1,50,000/-* ಅಡ್ವನ್ಸ್ ಹಣ ಕೊಟ್ಟಿದ್ದೆ. ಆ ಬೇಕರಿ ಪ್ರಾರಂಭದಲ್ಲಿ ಚೆನ್ನಾಗಿ ನಡೆಯುತ್ತಿತ್ತು ಆದರೆ ಕೆಲವು ದಿನಗಳ ನಂತರ ನನಗೆ ಆರೋಗ್ಯದ ಸಮಸ್ಯೆಯಾಗಿದ್ದರಿಂದ ಮತ್ತು ಕೆಲಸಗಾರರ ಸಮಸ್ಯೆಯಾಗಿದ್ದರಿಂದ ನಾನು ಬೇಕರಿಯನ್ನು ಮಾರಾಟ ಮಾಡುವ ಸಲುವಾಗಿ ಫೇಸ್ ಬುಕ್ ಗ್ರೂಪ್ ನಲ್ಲಿ ಮೇಸೇಜ್ ಹಾಕಿದ್ದೆ. ಆ ಕಾಲಕ್ಕೆ ಈ ಪ್ರಕರಣದ ಆರೋಪಿತ ಮೋಹನ್ ಕುಮಾರ್ ಆ ಫೇಸ್ ಬುಕ್ ಮೇಸೇಜ್ ಅನ್ನು ನೋಡಿ ನನ್ನ ಬೇಕರಿ ಬಳಿ ಬಂದು *2-3* ದಿನ ನೋಡಿ ನಂತರ ಇನ್ನೊಬ್ಬ ಬ್ರೋಕರ್ ಜೊತೆ ಬಂದು ನನ್ನ ಜೊತೆ ಮಾತುಕತೆ ಮಾಡಿ ಬೇಕರಿಯಲ್ಲಿದ್ದ ಎಲ್ಲಾ ವಸ್ತುಗಳನ್ನು *5,60,000/-* ರೂಪಾಯಿಗಳಿಗೆ ಖರೀದಿ ಮಾಡಲು ಒಪ್ಪಿಕೊಂಡಿದ್ದ. ನಂತರ ನನಗೆ ಹಣ ಕೊಟ್ಟು ಬೇಕರಿ ವಹಿಸಿಕೊಂಡಿದ್ದರು.

*2.* ನಂತರ *2023* ರ ಮೇ ತಿಂಗಳಿನಲ್ಲಿ ನಾನು ನಡೆಸುತ್ತಿದ್ದ ಬೇಕರಿಯಲ್ಲಿ ಕೊಲೆಯಾಗಿದೆ ಎಂದು ಠಾಣೆಗೆ ಬರುವಂತೆ ತಿಳಿಸಿದ್ದರು ಆ ಕಾಲಕ್ಕೆ ನಾನು ಮೇಟಗಳ್ಳಿ ಪೋಲೀಸ್ ಠಾಣೆಗೆ ಹೋಗಿದ್ದೆ. ಆ ಕಾಲಕ್ಕೆ ಆರೋಪಿತ ಮಮತಾ ಎನ್ನುವವರನ್ನು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ಆ ಕಾಲಕ್ಕೆ ನಾನು ನನ್ನ ಹೇಳಿಕೆ ಕೊಟ್ಟಿದ್ದೆ. ಮಾತುಕತೆ ಆಗಿ ನನ್ನಿಂದ ಬೇಕರಿ ಕೀ ಪಡೆಯುವ ಕಾಲಕ್ಕೆ ಆರೋಪಿತನೊಂದಿಗೆ ಮಮತಾ ಎನ್ನುವ ಮಹಿಳೆ ಬಂದಿದ್ದರು ಮತ್ತು ಅವರನ್ನು ತನ್ನ ಹೆಂಡತಿ ಎಂದು ಆರೋಪಿತ ಪರಿಚಯ ಮಾಡಿಸಿದ್ದರು. ಆ ಮಮತಾ ಇವರು ಸರ್ಕಾರಿ ನೌಕರರು ಎಂದು ಹೇಳಿದ್ದರು. ಮನೆ ಕಡೆ ನಮಗೆ ಸಪೋರ್ಟ್ ಇಲ್ಲ ಎಂದು ಸಹ ಆರೋಪಿತ ಹೇಳಿದ್ದರು. ನಾನು ಬೇಕರಿಯನ್ನು ಬಾಡಿಗೆಗೆ ಪಡೆದಾಗ ಆ ಬಗ್ಗೆ ಕರಾರು ಪತ್ರ ಮಾಡಿಕೊಂಡಿದ್ದೆ ನಾನು ಅದನ್ನು ಮಾರಾಟ ಮಾಡಿದ ಬಳಿಕ ಆ ಕರಾರು ಪತ್ರವನ್ನು ಆರೋಪಿತನಿಗೆ ಕೊಟ್ಟಿದ್ದೆ. ಪೋಲೀಸರು ನನಗೆ ಪೋನ್ ಮಾಡುವ ಮೊದಲೇ ಸಿದ್ದಲಿಂಗಪುರದ ನನ್ನ ಗ್ರಾಹಕರು ಯಾರೋ ಪೋನ್ ಮಾಡಿ ನಿಮ್ಮ ಬೇಕರಿಯಲ್ಲಿ ಕೊಲೆಯಾಗಿದೆ ಎಂದು ತಿಳಿಸಿದ್ದರು. ಈ ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿರುವ ಆರೋಪಿತನೇ ಮೋಹನ್ ಕುಮಾರ್ ಇರುತ್ತಾನೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು</u>

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*